SRI S. M. YAHYA —Arts 1945, out of which 165 belong to the Scheduled Castes and one belong to the S.T.

Science : 1030, out of which 19 belong to the S.C and no schedul.d tribe ; Commerce 515 : out of which 2 belong to the SC and no schedule tribe. Diploma holders : 80 belong to the Scheduled castes and none belong to the Scheduled Tribe ; ITIs. apprenticeship and other Certificate Holders : 59 belong to the SC/ and none to the Scheduled Tribes ; Matriculation including PUC 12879 registered, out of which 1444 belong to the Scheduled Castes and 6 to the Scheduled Tribes. Below metericalation registered 6679, out of which 1265 belong to the Scheduled Castes and 50 belong to the Scheduled Tribes.

SRI M. S. KRISHNAN.—Has it come to the notice of the Government that there is a complaint saying that the Industries in Belgaum are not taking candidates from the Employment Exchange, and if so, will they direct the industries to take candidates from the Employment Exchange ?

SRI S. M. YAHYA.—I have not received any complaint. If any complaint is received in this regard, we will certainly interfere in the matter.

SRI B. B. SAYANAK —May I know whether the Indian Alluminium Co. is not giving opporunities to the Scheduled Castes and the Scheduled Tribes to serve ?

SRI S. M. YAHYA.—The Employement Exchange has very limited and a specific purpose. They only Register and sponsor the candidates. Only the private employers or the indistries have to notify the vacancies. To that extent, the Employment Exchange is working satisfactorily.

Establishment of cotton yarn mills at Arasikere

682. SRI A. NANJAPPA (Arasikere).—Will the Minister for Industries and Parliamentary Affairs be pleased to state :—

(*a*) whether the Government have received any representations, regarding establishment of cotton yarn Mills at Arasikere, being the centre of Arasikere Taluka ;

(*b*) whether Government would take steps to establish the same ?

SRI S. M. KRISHNA (Minister for Industries and Parliamentary Affairs). —

(*a*) No.

(*b*) No.

ಶ್ರೀ ಎ. ನಂಜಪ್ಪ.— ಮಾನ್ಯ ಮಂತ್ರಿಗಳು ಉತ್ತರ ನೀಡುತ್ತಾ, ಅರಸೀಕೆರೆ ತಾಲ್ಲೂಕು ಕೇಂದ್ರವಾದ ಅರಸೀಕೆರೆಯಲ್ಲಿ ಒಂದು ಹತ್ತಿ ನೂಲಿನ ಗಿರಣಿಯನ್ನು ಸ್ಥಾಪಿಸುವುದಕ್ಕೆ ಮನವಿಗಳು ಬಂದಿಲ್ಲವೆಂದು ತಿಳಿಸಿದ್ದಾರೆ. ಅರಸೀಕೆರೆ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ, ಸಹಕಾರ ಸಂಘಗಳ ಮುಖಾಂತರವಾಗಲೀ, ಅಥವಾ ವೈಯಕ್ತಿಕವಾಗಲೀ ಒಂದು ಹತ್ತಿ ನೂಲಿನ ಗಿರಣಿಯನ್ನು ಪ್ರಾರಂಭಿಸುವಷ್ಟು ಶಕ್ತಿ ಯಾರಿಗೂ ಇಲ್ಲ. ಆದುದರಿಂದ, ಸರ್ಕಾರದವರೇ ನೇರವಾಗಿ, ಅಲ್ಲಿ ಒಂದು ಹತ್ತಿ ನೂಲಿನ ಗಿರಣಿಯನ್ನೂ ಸ್ಥಾಪಿಸಿದರೆ, ಅಲ್ಲಿರುವ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುವುದಲ್ಲದೆ, ಹತ್ತಿ ಬೆಳೆಯುವವರಿಗೆ ಪ್ರೋತ್ಸಾಹ ನೀಡಿದಂತೆಯೂ ಆಗುತ್ತದೆ. ಆದುದರಿಂದ, ಈಗಲಾದರೂ ಸರ್ಕಾರದವರು ನೇರವಾಗಿ ಅಲ್ಲಿ ಒಂದು ಹತ್ತಿ ಗಿರಣಿಯನ್ನು ಸ್ಥಾಪನೆ ಮಾಡುವುದಕ್ಕೆ ಪರಿಶೀಲನೆ ಮಾಡುವರೆ ?

ಶ್ರೀ ಎಂ. ವಿರಪ್ಪ ಮೊಯಿಲಿ.— ಅರಸೀಕೆರೆಯ ಕಾಟನ್ ಪ್ರೊಸೆಸಿಂಗ್ ಸೊಸೈಟಿಯವರು, ಅಲ್ಲಿ ಒಂದು ಸ್ಪಿನಿಂಗ್ ಮಿಲ್ಲನ್ನು ಸ್ಥಾಪನೆ ಮಾಡುವ ಉದ್ದೇಶದಿಂದ, ಲೈಸೆನ್ಸ್‌ಗಾಗಿ ಕೇಂದ್ರ ಸರ್ಕಾರಕ್ಕೆ ಒಂದು ಅರ್ಜಿಯನ್ನೂ ಹಾಕಿದ್ದರು ಆದರೆ, ಹತ್ತಿ ಗಿರಣಿಯನ್ನು ಸ್ಥಾಪನೆ ಮಾಡುವುದಕ್ಕೆ ಲೈಸೆನ್ಸ್ ಅಗತ್ಯವಿಲ್ಲ. ಅಲ್ಲದೆ, ಆ ಸೊಸೈಟಿಯವರು ಷೇರು ಬಂಡವಾಳವನ್ನು ಶೇಖರಿಸುವುದಕ್ಕೆ ಯಾವ ಕೆಲಸವನ್ನೂ ಮಾಡಿಲ್ಲ. ಅರಸೀಕೆರೆಯಲ್ಲಿ ಒಂದು ಹತ್ತಿ ಗಿರಣಿ ಸ್ಥಾಪನೆ ಮಾಡುತ್ತೇವೆ ಎಂದು ಯಾವ ಅರ್ಜಿಯೂ ನಮ್ಮ ಸರ್ಕಾರಕ್ಕೆ ಬಂದಿಲ್ಲ; ಮತ್ತು ಸರ್ಕಾರಕ್ಕೆ ಅಲ್ಲಿ ಅದನ್ನು ಸ್ಥಾಪನೆ ಮಾಡುವಂಥ ಯೋಜನೆಯೂ ಇಲ್ಲ.

ಶ್ರೀ ಎ. ನಂಜಪ್ಪ.— ಕೈಗಾರಿಕೆಗಳನ್ನು ವಿಕೇಂದ್ರೀಕರಣ ಮಾಡುವ ತತ್ವವನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಸುಮಾರು ಎರಡು ಲಕ್ಷ ಜನಸಂಖ್ಯೆ ಇರುವ ಒಂದು ತಾಲ್ಲೂಕಿನಲ್ಲಿ, ಕನಿಷ್ಠ ಇಪ್ಪತ್ತು ಸಾವಿರವಾದರೂ ನಿರುದ್ಯೋಗಿಗಳು ಇರುತ್ತಾರೆ. ಅಂಥ ಕಡೆಗಳಲ್ಲಿ, ಸರ್ಕಾರದವರು ಒಂದೆರಡು ಕೋಟಿ ರೂಪಾಯಿಗಳನ್ನು ಬಂಡವಾಳವಾಗಿ ಹಾಕಿ, ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರಿಂದ, ಅಲ್ಲಿನ ಸುಮಾರು ಎಂಟು-ಹತ್ತು ಸಾವಿರ ನಿರುದ್ಯೋಗಿಗಳಿಗೆ ಕೆಲಸ ಸಿಕ್ಕಿದಂತಾಗುತ್ತದೆ ಮತ್ತು ಹತ್ತಿ ಬೆಳೆಯುವವರಿಗೆ ಉತ್ತಮ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಆದುದರಿಂದ, ಮಾನ್ಯ ಮಂತ್ರಿಗಳು ಇದನ್ನು ಪುನರ್ ಪರಿಶೀಲನೆ ಮಾಡಿ, ಅರಸೀಕೆರೆಯಲ್ಲಿ ಒಂದು ಹತ್ತಿ ನೂಲಿನ ಗಿರಣಿಯನ್ನು ಸ್ಥಾಪನೆ ಮಾಡುವುದಕ್ಕೆ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವಿರಪ್ಪ ಮೊಯಿಲಿ.— ಅಲ್ಲಿನ ಕಾಟನ್ ಪ್ರೊಸೆಸಿಂಗ್ ಸೊಸೈಟಿಯವರು ಷೇರು ಬಂಡವಾಳವನ್ನು ಸಂಗ್ರಹ ಮಾಡಿ, ಇದನ್ನು ಸ್ಥಾಪನೆ ಮಾಡಬಹುದು. ಈ ಕುರಿತು, ಬೇಕಾದರೆ, ಸರ್ಕಾರ ಎಲ್ಲ ರೀತಿಯ ಸಹಾಯ ನೀಡುತ್ತದೆ. ಆದರೆ, ಸರ್ಕಾರದ ಪರವಿಯಿಂದಲೇ ಸಂಪೂರ್ಣವಾಗಿ ಇದನ್ನು ಸ್ಥಾಪನೆ ಮಾಡುವಂಥ ಯೋಜನೆ ಅಥವಾ ಧೋರಣೆ ಸದ್ಯಕ್ಕಿಲ್ಲ.

Inadequate Water Supply to Athani Town

689. SRI A. A. DESAI (Athani).— Will the Minister for Law and Municipal Administration be pleased to state,—

(*a*) the population of Athani Town ;

(*b*) the quantity of drinking water that the people of Athani require per day ;

(*c*) whether the quantity that is presently supplied to Athani town is sufficent ;

(*d*) if not, the steps the Government proposes to take to improve water supply to Athani town and when ?